ಬಂದ ಕರ್ಣನು ತನ್ನ ಬಲ್ಮೆಯ ತಿಳಿಯಬೇ | ಕೆಂದು ಮಾಗಧನೆದೆಗೊಳಿಸೆ ||
ಕುಂದುಪೆರ್ಚುಗಳಿಗೆ ಕೊಸಱದೆ ಕರ್ಣನು | ಮಂದವನೊಳು ಕಾದಿದನು || ೨
ಕಣೆಗಳನೆಚ್ಚು ಕೈಗಳು ಸೋಲೆ ಗಾಯಕೆ | ಹಣಿಯ ಮೈಕರ್ಣಮಾಗಧರು ||
ಸೆಣಸಿ ತಮ್ಮೊಳು ತಾವು ದಿವ್ಯಾಸ್ತ್ರಂಗಳ | ಗಣನೆಗೊಂಬಂತೆ ಕಾದಿದರು || ೩
ಸರಳು ಸಮೆಯ ಬಿಲ್ಲ ಬಿಸುಟು ಖಂಡೆಯಗೊಂಡು|ಗರುವರಿರ್ವರು ಕೈಮೆಯೊಳು||
ಧರೆಯ ಬೀರರು ಸೈಯೆನೆ ಕಾದಿ ತಣಿದೊ | ರ್ವರನೊರ್ವರು ಮೆಚ್ಚಿದರು || ೪
ಕತ್ತಿಗಳುಡಿಯ ಕಳೆದು ಬಿಸುಟದನು ಏ | ರೋತ್ತಮರುರುಬ್ಬಿದ್ದೊಡನೆ ||
ಬಿತ್ತರವಱಿತು ಪೆಣಗಿ ಬಿದ್ದೆದ್ದು ಪೊ | ಯ್ದತ್ತಿ ಮುಷ್ಟಿಯೊಳು ಕಾದಿದರು || ೫
ಭರದಿ ಮೋಸವ ಕೊಂಡು ಪಾಯ್ದು ಕೆಡಪಿ ಕರ್ಣ | ನಿರದೆದೆಯೇಱಿ ಮಾಗಧನ
ಜರೆಯೆಂಬ ರಕ್ಕಸಿ ಜತೆಗೂಡಿಸಿದ ಮೈಯ | ಹುರಿ ಬಿಚ್ಚಿ ಪೊಯ್ದೀಂಗಿದನು || ೬
ಬಲುಗಾಳಿಗದೊಳು ಬಸಗೆಡೆ ಮೆಯ್ತನ್ನ | ಚಲವೞಿದವನು ಜಾಣ್ಮೆಯೊಳು||
ಪಲಬಗೆಯೊಳು ಪತಿಕರಿಸಿ ಕರ್ಣನಿಗಂ | ದೊಲಿದಿತ್ತನಂಗದೇಶವನು ||
ಎಲೆ ರಾಯ ಕೇಳಂದಿನಿಂದೆ ಕರ್ಣನುಮಾ | ನೆಲನ ಪಾಲಿಸುತ ನೇಮದೊಳು||
ಅಲಸದೆ ಕೌರವನಾಣತಿವಿಡಿದಿರ್ಪ | ನೆಲೆಯನು ನೀನಱಿತಿರುವೆ || ೮
ಇವನಿಂತು ಜಸವಡೆದಿರೆ ವಾಸವನಂ | ದು ವಿಪ್ರವೇಷದೊಳು ||
ಕವಚಕುಂಡಲಗಳ ಕಾಮಿಸಿ ಕೇಳಿದೊ | ಡವನಿತ್ತನಱಿತುಮಱಿಯದೆ || ೯
ಕವಚಕುಂಡಲಂಗಳ ಕಳೆದಿತ್ತು ಬೞಿಮೈಯೊ | ಳವನಿರೆ ನಾಡವರಂತೆ ||
ಕವಿದೆಚ್ಚು ಕೊಂದನರ್ಜುನನಂದು ತನ್ನ ರ | ಥವನೇಱಿ ಬರೆ ಮಾಧವನು || ೧೦
ಅವನೀಶ ಕೇಳಗ್ನಿಹೋತ್ರಿ ವಿಪ್ರನ ಶಾಪ | ನವೆಯದ ಭಾರ್ಗವಶಾಪ ||
ಅವಿವೇಕದೊಳು ಕುಂತಿಗಂದಿತ್ತ ವರವಂ | ತಿವಱಿಕೊಳ್ದನಿನಸುತನು || ೧೧
ಕವಚಕುಂಡಲದಾನವೊಂದು ಗಾಂಗೇಯನೊ | ಳವಮತಿಗೆಯ್ದುದೊಂದು ||
ಅವನರ್ಧರಥಿಕನೆಂಪಾಡಿದುದೊಂದಿಂ | ತಿವಱಿಕೊಳ್ದನಿನಸುತನು || ೧೨
ಇವನಿಗೆ ಸಾರಥಿಯೆನಿಸಿರ್ದ ಶಲ್ಯನಂ | ದಿವನೞಿಕೆಗೆಯ್ದುಗೊಂದು ||
ಅವನೀಶ ಕೇಳುಯಚ್ಯುತನೆಸಕವೊಂ | ದಿವಱಿಕೊಳ್ದನಿನಸುತನು || ೧೩
ಶಿವಶಕ್ರಯಮಸಲಿಲೇಶಕೃಪದ್ರೋಣ | ಶಿವಸಖರೊಲಿದು ಕಲಿಸಿದ ||
ವಿವಿಧದಿವ್ಯಾಸ್ತ್ರದ ವಿಭವವನಾಂತಂ | ದವನ ಗೆಲಿದನರ್ಜುನನು || ೧೪
ಪಲವು ಸಾಪಗಳಿಂದೆ ಪಲವು ಮಾಯಗಳಿಂದೆ | ಪಲರಿವನನು ಮಡಪಿದರು ||
ನೆಲೆಯಿಂದು ನೀನಿದನಱಿತಿನ್ನೀಪರಿ | ಪಲುಬಿ ಬೞಿದೆ ಒಱಲದಿರು || ೧೫

ಇಂತು ಷಷ್ಠಸಂಧಿ

೨೧ ಪಾಡು-ಸೇನೆ. ಇಂ-ಇನ್ನು. ವಾಘೆ-ಕಡಿವಾಣ.
೨೨ ಜವೆ-ಯುವೆಯುಷ್ಟು. ಕೊಂಕದಂತೆ-ಅತ್ತಿತ್ತ ಚಲಿಸದಂತೆ.

## ೬ ನೆಯ ಸಂಧಿ.

೧ ಬಲ್ಲಹ-ತ್ಸ. ವಲ್ಲಭ. ೨. ಕುಂದು-ಕೊರತೆ, ಕಡಮೆ.
೪ ಖಂಡೆಯ-ಕತ್ತಿ. ಸ್ವೈಯನೆ-ಸ್ವೈ ಎಂಬದಾಗಿ ಒಪ್ಪುವಂತೆ.
೮ ಆಣತಿ-ತ್ಸ. ಆಜ್ಞಪ್ತಿ-ಅಪ್ಪಣೆ.

## ೭ ನೆಯ ಸಂಧಿ.

೩ ಪಾಳಿಗೆಟ್ಟೆವು-ಸರಿಯಾದ ಮಾರ್ಗವನ್ನು ಬಿಟ್ಟು ಚದರಿಹೋದೆವು. ಅಟಿ-ವ್ಯಗ್ರರಾಗಿ

೪ ಕಟಪ್ಪಸುರ-ಕಟು+ಕ್ರೂರವಾದ,+ಅಸುರ-ರಾಕ್ಷಸಕ್ಕೆ; ಕ್ರೂರರಾದ ರಾಕ್ಷಸರಂತೆ: ಎಂದು ತಾತ್ಪರ್ಯ.

೬ ತರಹರ-ಸಹನೆ ೭ ಬಿಂಕ-ಗರ್ವ. ೯ ಅರಿ-ಕತ್ತರಿಸು.
೧೦ ಪೆಣಗಳನ್ನು ತಿನ್ನತಕ್ಕ ನೀಚರು-ಪಿಶಾಚಿಗಳು. ೧೩ ನೆರವು-ಗುಂಪು.
೧೪ ಮಿತ್ತು-ತ್ಸ. ಮೃತ್ಯು. ಕಾಲ-ಯಮ.
೨೦ ಪೋರಟೆ-ಹೊಸಗನ್ನಡ. ಹೋರಾಟ. ಉತ್ತರಿಸು-ತೀರಿಸು
೨೬ ಅಟಿಜಸ-ಕ್ಷುದ್ರವಾದ, ನೀಚವಾದ ಯಶಸ್ಸು.
೨೮ ಪಪೇಳುವೆನು-ಏನನ್ನು ಹೇಳುವೆನು ೩೧ ಉಜ್ಜುಗ-ತ್ಸ ಉದ್ಯೋಗ.
೩೨ ಬಸಣೆ-ದ್ಸ, ಭ್ರಮರಿ, ಕೋಟಲೆ ೩೩ ಅಂಕೆ-ಆಜ್ಞೆ.
೩೪ ಮುಪ್ಪುರ=ಮೂರು+ಪುರ ಮೂರು ಪುರಗಳನ್ನು ಹೊಸೆದಂತೆ ಬಲವಾದ.

೩೬ ಮನುಜಾಭಾಸ-ಗುಣಗಳನ್ನು ನೋಡುವಲ್ಲಿ ನಿಜವಾಗಿಯೂ ಮನುಷ್ಯನಲ್ಲ; ಮನುಷ್ಯನಹಾಗೆ ಹೊರಗೆಮಾತ್ರ ತೋರಿಸಿಕೊಳ್ಳುವನು, ಒಳರಿ-ಉಂಟೆ ?

೪೦ ತಿಳಿದುದು-ಶಾಂತವಾಯಿತು, ಹೋಯಿತು; ಈ ಅರ್ಥ ಹೇಗೆ ಬಂತು ? ತಳುವದೆ-ಸಾವಕಾಶಮಾಡದೆ. ದಳ್ಳುರಿ=ದಳ್ಳಿತು-ವೇಗವಾದ+ಉರಿ.

೪೨ ಪುಟ್ಟುವೊಂದು-ಹುಟ್ಟುಸಾವು. ಮುಸುಕದು-ಮುಚ್ಚಿಕೊಳ್ಳದು. ಜಟ್ಟಿತವ್ವುದು-ದೃಢವಾಗಿರುವುದು.

೪೩ ಸುಖದುಃಖ, ಶೀತಉಷ್ಣ ಇಂಥವುಗಳೇ ದ್ವಂದ್ವಗಳು.
೪೫ ನಾಡಾಡಿ-ನಾಡಿನಲ್ಲಿ ಆಡುವಂಥ ಎಂದರೆ ಸರ್ವಸಾಮಾನ್ಯವಾದ.
೪೬ ಬೇಸನ-ತ್ಸ, ವ್ಯಸನ, ಚಿಂತೆ, ಶೋಕ. ೪೮. ಅಂಡಲೆವ-ಪೀಡಿಸುವ,

